# ‘ಭಾವಾವೇಶದಿಂದ ಅರಿವಿನತ್ತ ಸಾಗಲಿ ಹೋರಾಟ’

**ಜನ ಲೋಕಪಾಲ ಮಸೂದೆ ಅಂಗೀಕಾರಕ್ಕೆ ಸಂಬಂಧಿಸಿ ಸರ್ಕಾರ ಮತ್ತು ಅಣ್ಣಾ ತಂಡದ ಹಗ್ಗ-ಜಗ್ಗಾಟ ಮುಂದುವರಿದಿದೆ. ಸತ್ಯಾಗ್ರಹದಿಂದ ಸರ್ಕಾರವನ್ನು ಬೆದರಿಸುತ್ತಿರುವ ಅಣ್ಣಾ ನಿರಶನದ ಕುರಿತೂ ವ್ಯಾಪಕ ಟೀಕೆಗಳು ಕೇಳಿಬರುತ್ತಿವೆ. ಅಣ್ಣಾ ಅವರ ಭ್ರಷ್ಟಾಚಾರ ವಿರೋಧಿ ನಡೆ ಜನಾಂದೋಲನವಾಗಿ ರೂಪುಗೊಳ್ಳುವ ಮುನ್ನ ಚರ್ಚೆ, ಸಮಾಲೋಚನೆಯಲ್ಲಿ ಪಾಲ್ಗೊಂಡಿದ್ದ ಲೇಖಕರು, ಈ ಹೋರಾಟ ಕೇವಲ ಭಾವಾವೇಶಕ್ಕೆ ಸೀಮಿತವಾಗದೇ ಗ್ರಾಮೀಣ ಭಾರತಕ್ಕೂ ವ್ಯಾಪಿಸಿದ ಪ್ರಬುದ್ಧ ಚಳವಳಿಯಾಗಬೇಕು ಎಂದಿದ್ದಾರೆ.**

ಕಳೆದ ಎರಡು ವಾರಗಳಿಂದ ದೇಶದಾದ್ಯಂತ ಬಿಸಿಬಿಸಿ ಚರ್ಚೆ. ‘ಅಣ್ಣಾ ಉಪವಾಸದಿಂದ ಸರ್ಕಾರ ಬಾಗುವುದೇ?’, ‘ಅಣ್ಣಾ ಮಾಡುತ್ತಿರುವ ಉಪವಾಸವು ಬೆದರಿಕೆ ಅಥವಾ ನೈತಿಕ ಬಲಾತ್ಕಾರವೇ?’, ‘ಏನಿದು ಲೋಕಪಾಲ ಮಸೂದೆ?’- ಇವೇ ಮೊದಲಾದ ಪ್ರಶ್ನೆಗಳು ಕೇಳಿಬರುತ್ತಿವೆ. ಟೀವಿ ಮತ್ತು ಮುದ್ರಣ ಮಾಧ್ಯಮ ರಾಮಲೀಲಾ ಮೈದಾನದಲ್ಲಿ ನಡೆಯುತ್ತಿರುವ ಎಲ್ಲಾ ಕದಲಿಕೆಗಳನ್ನು ಆಸಕ್ತಿಯಿಂದ ದಾಖಲಿಸುತ್ತಿವೆ. ಟೀವಿ ಚಾನೆಲ್‌ಗಳಲ್ಲಂತೂ ನಿತ್ಯವೂ ನೇರಪ್ರಸಾರ. ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಇಷ್ಟೊಂದು ನಾಗರಿಕರು ರಾಷ್ಟ್ರಕ್ಕೆ ಮುಖ್ಯವೆನ್ನಿಸಿದ ಕಾಯ್ದೆಗಾಗಿ ಕಾಳಜಿ ತೋರಿಸಿ ಒಂದೆಡೆ ಸೇರಿರಲಿಲ್ಲ. ‘ಹೀಗೆ ಸೇರುತ್ತಿರುವವರಿಗೆ ತಾವು ಯಾಕೆ ಪ್ರತಿಭಟನೆ ನಡೆಸುತ್ತಿದ್ದೇವೆ ಎಂಬುದರ ಅರಿವಿದೆಯೇ?’, ‘ಪ್ರತಿಭಟನೆಯೇನೋ ಸರಿ, ಮುಂದೇನು?’ ಎಂಬ ಬಹು ಮುಖ್ಯವಾದ ಪ್ರಶ್ನೆಗಳನ್ನು ಕೂಡ ಜನ ಕೇಳುವಂತಾಗಿದೆ. ಈ ಚಳವಳಿಯ ಆರಂಭದಿಂದಲೂ ಪಾಲ್ಗೊಂಡ ನನ್ನಂಥವರು ನಾಗರಿಕ ಸಮಾಜದ ಇತರೆ ಚಳವಳಿಕಾರರ ದೃಷ್ಟಿಕೋನವೇನು ಎಂಬುದನ್ನೂ ವಿನಿಮಯ ಮಾಡಿಕೊಂಡಿರುತ್ತೇವೆ. ‘ಭಾವನಾತ್ಮಕ ಕಾರ್ಯಾಚರಣೆ’ಯಿಂದ ‘ಅರಿವಿನ ಹೋರಾಟ’ದತ್ತ ಸಾಗಬೇಕಾದ ಸಮಯ ಬಂದಿದೆ.

ನನ್ನಂಥ ಅನೇಕರಿಗೆ ಭಾರತದಲ್ಲಿ ಭ್ರಷ್ಟಾಚಾರ ವಿರುದ್ಧದ ಚಳವಳಿ ಸಾಕಷ್ಟು ಹಳೆಯದು. ಅನೇಕ ಚಳವಳಿಕಾರರು ಒಂದಲ್ಲ ಒಂದು ಬಗೆಯಲ್ಲಿ ಎರಡು ದಶಕಗಳಿಂದ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ನಾವು ಕೆಲವರು ಸದ್ಯಕ್ಕೆ ಇರುವ ‘ಮಾಹಿತಿ ಹಕ್ಕು ಕಾಯ್ದೆ’ ಹಾಗೂ ‘ಭ್ರಷ್ಟಾಚಾರ ನಿರ್ಮೂಲನ ಕಾಯ್ದೆ’ಯನ್ನು ಈ ಸಮಸ್ಯೆಯ ವಿರುದ್ಧ ಹೋರಾಡಲು ಬಳಸಿದ್ದೇವೆ. ಈ ಮುಂಚಿನ ನಮ್ಮ ಹೋರಾಟದಿಂದ ಪಡೆದ ಅನುಭವವೇ ನಮ್ಮ ದೇಶಕ್ಕೆ ಸಮಗ್ರ ಹಾಗೂ ಪರಿಣಾಮಕಾರಿ ‘ಭ್ರಷ್ಟಾಚಾರ ನಿಗ್ರಹ ಕಾಯ್ದೆ’ ಬೇಕೆಂಬುದನ್ನು ಸಾರುತ್ತದೆ. ಈಗಿನ ಯುಪಿಎ ಸರ್ಕಾರವು ಭ್ರಷ್ಟಾಚಾರ ವಿರುದ್ಧದ ಹೋರಾಟವನ್ನೇ ತನ್ನ ಚುನಾವಣಾ ಪ್ರಣಾಳಿಕೆ ಮಾಡಿಕೊಂಡಿದ್ದು, 2010ರಲ್ಲೇ ಲೋಕಪಾಲ ಮಸೂದೆಯ ಕರಡನ್ನು ಸಿದ್ಧಪಡಿಸಿತು. ನನ್ನಂಥ ಅನೇಕರ ಪ್ರಕಾರ ಈ ಮಸೂದೆಯ ಕರಡು ದುರ್ಬಲವಾಗಿತ್ತು. ಪ್ರಧಾನಮಂತ್ರಿಯನ್ನು ವ್ಯಾಪ್ತಿಗೆ ತರುವ ಉಲ್ಲೇಖವೂ ಅದರಲ್ಲಿತ್ತು. ದುರ್ಬಲ ಕಾಯ್ದೆಯು ಇರುವುದಕ್ಕಿಂತ ಇಲ್ಲದೇ ಇರುವುದೇ ಲೇಸು ಎಂಬುದು ನಮ್ಮ ಭಾವನೆ. ಅಂಥ ಕಾಯ್ದೆಯು ನಿಷ್ಫಲವಷ್ಟೇ ಅಲ್ಲದೆ ಜನ ಭ್ರಷ್ಟಾಚಾರದ ವಿರುದ್ಧ ಮಾತನಾಡುವುದನ್ನು ಹಗುರವಾಗಿ ತೆಗೆದುಕೊಳ್ಳಲು ಪ್ರೇರಣೆಯಾಗುವ ಆತಂಕವಿದೆ. ನಾಗರಿಕ ಸಮಾಜದಲ್ಲಿದ್ದ ನನ್ನಂಥ ಅನೇಕರು ಈ ಮಸೂದೆಯ ಕುರಿತು ನಮ್ಮದೇ ಕರಡು ಸಿದ್ಧಪಡಿಸಬೇಕು ಎಂದು ತೀರ್ಮಾನಕ್ಕೆ ಬಂದೆವು. ಆ ಮೂಲಕ ಸರ್ಕಾರದ ಕರಡು ರಚನಾ ಪ್ರಕ್ರಿಯೆಯಲ್ಲಿ ತೊಡಗುವುದು ನಮ್ಮ ಉದ್ದೇಶವಾಗಿತ್ತು. ಮಾಹಿತಿ ಹಕ್ಕಿಗಾಗಿ ರಾಷ್ಟ್ರೀಯ ಹೋರಾಟ ನಡೆಸುತ್ತಿದ್ದ ‘ಎನ್‌ಸಿಪಿಆರ್‌ಐ’ ಕೂಡ ಮಸೂದೆಯ ಕರಡಿಗಾಗಿ ಕೆಲವು ಅಂಶಗಳನ್ನು ಸಿದ್ಧಪಡಿಸಿತು. ಸತ್ವವುಳ್ಳ ಈ ಅಂಶಗಳನ್ನು ಕರಡಿಗಾಗಿ ಬರೆದವರು ಅರವಿಂದ್ ಕೇಜ್ರಿವಾಲ್. ಉತ್ತಮ ಆಡಳಿತ ನಿರ್ವಹಣೆಗಾಗಿ ಇರುವ ರಾಷ್ಟ್ರೀಯ ಸಲಹಾ ಸಮಿತಿಯ ಉಪ ಸಮಿತಿಯು ಅರುಣಾ ರಾಯ್ ನೇತೃತ್ವದಲ್ಲಿ ಸರ್ಕಾರದ ದೃಷ್ಟಿಕೋನದ ಕರಡನ್ನು ಸಿದ್ಧಪಡಿಸತೊಡಗಿತು. ಅದಾಗಲೇ ಚಾಲ್ತಿಯಲ್ಲಿದ್ದ ಬಗೆಬಗೆಯ ದೃಷ್ಟಿಕೋನಗಳನ್ನು ಗಮನಿಸಿದರೆ ವಿವಿಧ ನಾಗರಿಕ ಸಮಾಜಗಳಲ್ಲೇ ಚರ್ಚೆ ಎಷ್ಟು ಕಾವು ಪಡೆದುಕೊಂಡಿತ್ತು ಎಂಬುದು ಅರ್ಥವಾದೀತು.

ನವೆಂಬರ್-ಡಿಸೆಂಬರ್ 2010ರ ಸುಮಾರಿಗೆ ‘ಎನ್‌ಸಿಪಿಆರ್‌ಐ’ ತಂಡದ ಕೆಲವರ ದೃಷ್ಟಿಕೋನವನ್ನು ಅರವಿಂದ್ ಒಪ್ಪಲಿಲ್ಲ. ಅವರು ಕಾಯ್ದೆಯು ಸಶಕ್ತವಷ್ಟೇ ಅಲ್ಲದೆ ಸಮಗ್ರವೂ ಆಗಿರಬೇಕೆಂದು ಬಯಸಿದರು. ಅದಕ್ಕೇ ಬಹುವಿಷಯಕ ಕಾಯ್ದೆಯ ಅಗತ್ಯವಿದೆ ಎಂದರು. ‘ಎನ್‌ಸಿಪಿಆರ್‌ಐ’ ತಂಡದಲ್ಲಿದ್ದ ಉಳಿದವರು ಕಾಯ್ದೆಯು ಸಶಕ್ತ-ಸಮಗ್ರವಾಗಿರುವುದರ ಜೊತೆಗೆ ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯವಾಗುವಂತೆ ಇರಬೇಕೆಂದು ಅಭಿಪ್ರಾಯಪಟ್ಟರು. ಅರವಿಂದ್ ತಾವೇ ಕರಡನ್ನು ರಚಿಸುವುದಾಗಿ ನಿರ್ಧರಿಸಿದರು. ಆಗಿನ್ನೂ ಅದರ ಪರಿಕಲ್ಪನೆ ಬೀಜರೂಪದಲ್ಲಿತ್ತು. ಅದೇ ಸಂದರ್ಭ, ಡಿಸೆಂಬರ್ 2010ರಲ್ಲಿ ಬೆಂಗಳೂರಿನ ಕೆಲವರು ‘ಭ್ರಷ್ಟಾಚಾರ ಸಾಕು’ ಎಂಬ ಹೋರಾಟ ಪ್ರಾರಂಭಿಸಿದರು. ಆ ಹೋರಾಟಕ್ಕೆ ಚಾಲನೆ ನೀಡುವ ಸಮಾರಂಭದಲ್ಲಿ ಮಾತನಾಡಲು ಕೇಜ್ರಿವಾಲ್ ಅವರನ್ನು ಕರೆದಿದ್ದರು. ಈ ಕಾಯ್ದೆಯನ್ನು ಅರ್ಥಪೂರ್ಣವಾಗುವಂತೆ ಮಾಡಲು ನಾಗರಿಕ ಸಮಾಜವನ್ನು ದೊಡ್ಡ ಪ್ರಮಾಣದಲ್ಲಿ ಸಂಘಟಿಸಬೇಕೆಂದು ಅರವಿಂದ್ ಹಾಗೂ ನಾವೆಲ್ಲಾ ನಿರ್ಧರಿಸಿದ್ದೇ ಆಗ.

ಅರವಿಂದ್ ಅವರಿಗಿದ್ದ ಸಂಘಟನಾ ಚತುರತೆಯಿಂದಾಗಿ ಅಣ್ಣಾ ಹಜಾರೆ, ಭೂಷಣ್‌ದ್ವಯರು, ಕಿರಣ್‌ಬೇಡಿ, ಸ್ವಾಮಿ ಅಗ್ನಿವೇಶ್, ಸಂತೋಷ್ ಹೆಗ್ಡೆ ಮೊದಲಾದ ಘಟಾನುಘಟಿಗಳನ್ನು ಒಂದೆಡೆ ಸೇರಿಸಿ ‘ಭ್ರಷ್ಟಾಚಾರದ ವಿರುದ್ಧ ಭಾರತ’ ಎಂಬ ಬ್ಯಾನರ್‌ನಡಿ ಹೋರಾಟ ಶುರುವಾಯಿತು. ಕಾಯ್ದೆಯನ್ನು ಮಾಡುವಾಗ ನಮ್ಮ ನಾಗರಿಕ ಸಮಾಜದ ಅಂಶಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುವಂತೆ ಮಾಡಲು ನಿರಂತರ ಹೋರಾಟ ನಡೆಸಬೇಕೆಂಬುದು ನಮಗೆಲ್ಲಾ ಆಗಲೇ ಸ್ಪಷ್ಟವಾಗಿ ಗೊತ್ತಿತ್ತು. ಮೊದಲ ಕರಡಿನ ಪ್ರತಿಯನ್ನು ಪ್ರಧಾನಿ ಹಾಗೂ ಎಲ್ಲಾ 28 ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡಲಾಗಿತ್ತು. ನಿರೀಕ್ಷೆಯಂತೆಯೇ ಯಾರೂ ಕರಡಿನ ಬಗ್ಗೆ ಪ್ರತಿಕ್ರಿಯೆ ನೀಡಲಿಲ್ಲ. ನಮ್ಮನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು.

ಸರ್ಕಾರದೊಡನೆ ನಮ್ಮ ವಕಾಲತ್ತು ಮಾಡೋಣವೆಂದು ನಾವು ಕೆಲವರು ಪ್ರಧಾನಿ ಸಿಂಗ್ ಅವರನ್ನು ಭೇಟಿ ಮಾಡಿದೆವು. ಅವರ ಪ್ರತಿಕ್ರಿಯೆ ಉತ್ತೇಜನಕಾರಿಯೇನೂ ಆಗಿರಲಿಲ್ಲ. ಸರ್ಕಾರವು ಪರಿಣಾಮಕಾರಿಯೂ ಗಟ್ಟಿಯೂ ಆದ ಕಾಯ್ದೆ ತರುವ ಬಗ್ಗೆ ಗಂಭೀರವಾಗಿಲ್ಲವೆಂಬುದು ನಮಗೆ ಸ್ಪಷ್ಟವಾಯಿತು. ಆಗಲೇ ಅಣ್ಣಾ ಜಿ ಭಾವುಕತೆಯಿಂದ ಉಪವಾಸ ಕೂರುವುದಾಗಿ ಘೋಷಿಸಿದ್ದು. ಅಷ್ಟರಲ್ಲೇ ರಾಷ್ಟ್ರ ಮಟ್ಟದಲ್ಲಿ ಜನಜಾಗೃತಿ ಮೂಡಿ, ಸರ್ಕಾರಕ್ಕೆ ಹಿನ್ನಡೆ ಉಂಟಾಯಿತು.



ಆನಂತರದ ಐದು ತಿಂಗಳಿನಲ್ಲಿ ಜನ ಪ್ರತಿಕ್ರಿಯಿಸಿರುವ ಬಗೆಯನ್ನು ನೋಡಿದರೆ ನಿತ್ಯಬದುಕಿನ ಭ್ರಷ್ಟಾಚಾರದಿಂದ ಜನ ಎಷ್ಟು ರೋಸಿ ಹೋಗಿದ್ದಾರೆಂಬುದು ತಿಳಿಯುತ್ತದೆ. ಇದುವರೆಗಿನ ಭಾವನಾತ್ಮಕ ಪ್ರತಿಕ್ರಿಯೆಯು ಸರ್ಕಾರಕ್ಕೆ ಜನರ ಮನಸ್ಥಿತಿ ಹೇಗಿದೆ ಎಂಬುದರ ಸೂಚನೆ. ಅಣ್ಣಾ ಕರೆಗೆ ಓಗೊಟ್ಟು ಬೀದಿ ಬೀದಿಗೆ ಇಳಿದ ಜನ ಪ್ರತಿಭಟನೆಯ ಭಾಗವಾದರು. ಈಗ ಅವರೆಲ್ಲಾ ಲೋಕಪಾಲ ಬೇಕೆಂದು ಆಗ್ರಹಿಸುತ್ತಿದ್ದಾರೆ.

ಚಳವಳಿಯು ಸಾಂವಿಧಾನಿಕ ನ್ಯಾಯಸಮ್ಮತತೆಯನ್ನು ಧಿಕ್ಕರಿಸುತ್ತಿದೆಯೇ ಎಂಬ ಪ್ರಶ್ನೆಯನ್ನೆತ್ತಿ ಅನೇಕ ಅರ್ಥಪೂರ್ಣ ಟೀಕೆಗಳು ಬಂದಿವೆ. ನಾಗರಿಕ ಸಮಾಜವು ‘ಒತ್ತಡ ಹೇರುವ ಗುಂಪು’ ಎಂಬ ಚೌಕಟ್ಟನ್ನು ಮೀರಿ ತಾನೇ ಕಾಯ್ದೆ ರೂಪಿಸುವ ಧೋರಣೆಯನ್ನು ತೋರುತ್ತಿದೆಯೇ ಎಂಬುದು ಆ ಪ್ರಶ್ನೆ. ಕಳೆದ ಕೆಲವು ದಿನಗಳಿಂದ ಅನಾವರಣಗೊಂಡಿರುವ ಹಲವು ಘಟನೆಗಳು ಚಳವಳಿ ಪ್ರಾರಂಭವಾದಾಗಿನಿಂದ ಸಕ್ರಿಯವಾಗಿರುವ ನಮ್ಮಂಥ ಕೆಲವರಿಗೆ ಮುಜುಗರ ಹುಟ್ಟಿಸುವ ಪ್ರಶ್ನೆಗಳು ಮೂಡಲು ಕಾರಣವಾಗಿವೆ.

ರಾಮಲೀಲಾ ಮೈದಾನದಲ್ಲಿ ಅಪಾರ ಜನಸ್ತೋಮ ನೆರೆದಿರುವುದನ್ನು ಟೀವಿ ಕ್ಯಾಮೆರಾಗಳು ತೋರುತ್ತಿವೆ. ಈ ಚಳವಳಿಯ ಹಿನ್ನೆಲೆಯಲ್ಲಿ ನಡೆಯುತ್ತಿರುವ ಚರ್ಚೆ ನಗರದ ಶ್ರೀಮಂತ ಹಾಗೂ ಮಧ್ಯಮವರ್ಗದವರಿಗೇ ಸೀಮಿತಗೊಳ್ಳದೆ ಭ್ರಷ್ಟಾಚಾರದ ದೊಡ್ಡ ಪೆಟ್ಟು ತಿನ್ನುತ್ತಿರುವ ಹಳ್ಳಿಗಳಿಗೂ ಹಬ್ಬಬೇಕು. ದೆಹಲಿಯ ಕೆಲವರಷ್ಟೇ ನಾಗರಿಕ ಸಮಾಜದ ಪ್ರತಿನಿಧಿಗಳಾಗಲಾರರು. ಸಮಾಲೋಚನೆ ನಡೆಸುವವರಲ್ಲಿ ಗ್ರಾಮೀಣ ಹಿನ್ನೆಲೆಯವರೂ ಸೇರಿಕೊಳ್ಳಬೇಕು.

ಸರ್ಕಾರವು ಕೆಲವು ದಿನಗಳಿಂದ ಪ್ರತಿಗಾಮಿ ಧೋರಣೆ ತೋರಿಸಿತ್ತು. ಆದರೀಗ ಸದಾಡಳಿತ ಬಯಸಿ ನಡೆದಿರುವ ಜನಾಗ್ರಹದ ಪರಿಣಾಮ ಅದಕ್ಕೂ ಮನವರಿಕೆಯಾಗಿರಬೇಕು. ಭ್ರಷ್ಟಾಚಾರವೇ ಮುಂದಿನ ಚುನಾವಣೆಗಳಲ್ಲಿ ಮುಖ್ಯ ವಿಷಯವಾದೀತೆಂಬ ಸೂಚನೆಯೂ ರಾಜಕಾರಣಿಗಳಿಗೆ ಸಿಕ್ಕಿದೆ. ಕಳೆದೊಂದು ವಾರದಲ್ಲಿ ಪ್ರಧಾನಿ ನೀಡಿರುವ ಬಗೆಬಗೆಯ ಹೇಳಿಕೆಗಳೇ ಸರ್ಕಾರದ ಧೋರಣೆಗೆ ಕನ್ನಡಿ ಹಿಡಿಯುವಂತಿದೆ. ‘ಅಣ್ಣಾ ಇಷ್ಟು ಹಠ ಹಿಡಿದಿರುವುದು ಯಾಕೆ?’ ಎಂಬ ಪ್ರಶ್ನೆ ಕೇಳುವವರು ದಿನೇದಿನೇ ಹೆಚ್ಚುತ್ತಿದ್ದಾರೆ. ಈ ಧ್ವನಿಯನ್ನು ಕೇಳಿಸಿಕೊಳ್ಳಲೇಬೇಕು. ಅಣ್ಣಾ ತಂಡದ ಮುಖ್ಯ ಸದಸ್ಯರಲ್ಲಿ ಒಬ್ಬರಾದ ಸ್ವಾಮಿ ಅಗ್ನಿವೇಶ್ ತಮ್ಮ ಮುಜುಗರವನ್ನು ಹತ್ತಿಕ್ಕಲಾಗದೆ ಉಪವಾಸವನ್ನು ಮುಂದುವರಿಸಲೇಬೇಕೆ ಎಂಬ ಪ್ರಶ್ನೆಯನ್ನೂ ಬಹಿರಂಗವಾಗಿಯೇ ಕೇಳಿದರು.

ಪ್ರಜಾಪ್ರಭುತ್ವದಲ್ಲಿ ಸಂಸತ್‌ನಲ್ಲೇ ಕಾಯ್ದೆ ರೂಪಿತವಾಗಬೇಕು. ಅದು ಎಷ್ಟೇ ನಿಧಾನವಾದರೂ ಅನಿವಾರ್ಯ. ಇದನ್ನರಿತು ಅಣ್ಣಾ ತಂಡವು ಇನ್ನು ಮುಂದೆ ವರ್ತಿಸಬೇಕು. ಅರವಿಂದ್ ಹಾಗೂ ಪ್ರಶಾಂತ್ ಭೂಷಣ್ ಇಬ್ಬರೂ ಅಣ್ಣಾ ಅವರಿಗೆ ಸಲಹೆಗಳನ್ನು ನೀಡುತ್ತಾರೆ. ಹಾಗಾಗಿ ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ‘ನಮ್ಮದೇ ಮೂಗಿನ ನೇರದ ಕಾಯ್ದೆ ಬೇಕು’ ಎಂದು ಪಟ್ಟುಹಿಡಿಯುವ ಬದಲು ಪ್ರಾಯೋಗಿಕ ಸ್ಥಿತಿಗೆ ಹೊಂದುವ ಕಾಯ್ದೆಗೆ ಆಗ್ರಹಿಸಬೇಕು. ಇತರೆ ನಾಗರಿಕ ಸಮಾಜಗಳೂ ಈ ಚರ್ಚೆಗೆ ದನಿಗೂಡಿಸಬೇಕು. ಸಂಸತ್‌ನ ಸ್ಥಾಯಿ ಸಮಿತಿಯ ಆಹ್ವಾನವನ್ನು ಸದುಪಯೋಗಪಡಿಸಿಕೊಂಡು ನಮ್ಮ ಆಗ್ರಹವನ್ನು ಪರಿಣಾಮಕಾರಿಯಾಗಿಯೂ ಪ್ರಬಲವಾಗಿಯೂ ಮಂಡಿಸಬೇಕು. ಮುಂಬರುವ ಚುನಾವಣೆ ದೃಷ್ಟಿಯಿಂದ ಜನಾಭಿಪ್ರಾಯ ಎಷ್ಟು ಮುಖ್ಯ ಎಂಬುದನ್ನು ಸಂಸತ್ ಸದಸ್ಯರಿಗೆ ಮನವರಿಕೆ ಮಾಡಿಸಬೇಕು.

ಅಣ್ಣಾ ಇನ್ನು ಉಪವಾಸ ಬಿಡಬೇಕು. ತಮಗೆ ಸಿಕ್ಕಿರುವ ಜನಪ್ರಿಯತೆಯನ್ನೇ ಉಪಯೋಗಿಸಿಕೊಂಡು ಸರ್ಕಾರದ ಜೊತೆ ಹಾಗೂ ಇನ್ನಷ್ಟು ನಾಗರಿಕ ಸಮಾಜಗಳ ಜೊತೆ ಚರ್ಚೆಯಲ್ಲಿ ತೊಡಗಬೇಕು. ಗಟ್ಟಿಯಾದ, ನಾಗರಿಕ ಸಮಾಜವೂ ಭಾಗಿಯಾಗಬಹುದಾದ, ಪರಿಣಾಮಕಾರಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯನ್ನು ಜಾರಿಗೆ ತರಲು ಇದು ಅಗತ್ಯ. ನಾವೆಲ್ಲರೂ ಒಟ್ಟಾಗಿ ಈ ಬಗ್ಗೆ ನಿರ್ಧಾರಕ್ಕೆ ಬರಬೇಕಿದೆ. ಸ್ವಪ್ರತಿಷ್ಠೆ ಬದಿಗಿಟ್ಟು, ನಾವು ಭಾರತೀಯರು ಎಂಬ ಭಾವನೆಯಿಂದ ಉತ್ತಮ ಕಾಯ್ದೆಗಾಗಿ ಆಗ್ರಹಿಸಬೇಕಿದೆ.

**ಡಾ.ಆರ್.ಬಾಲಸುಬ್ರಹ್ಮಣ್ಯಂ**

(ಲೇಖಕರು ಭ್ರಷ್ಟಾಚಾರ ವಿರೋಧಿ ಹೋರಾಟಗಾರರು ಹಾಗೂ ‘ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್’ನ ರೂವಾರಿ.)